ಸುದ್ದಿ ಸಿಂಚನ

ಗಣೇಶ ಹೆಗಡೆ, ಶಿವಾನಂದ ಹೆಗಡೆಗೆ ಗೌರವ ಡಾಕ್ಟರೇಟ್

ಹೊನ್ನಾವರ: ಅಮೆರಿಕ ಫ್ಲೋರಿಡಾದ ಶ್ರೀ ವಿದ್ಯಾ ವೇದ ವಿಜ್ಞಾನ ಅಂತಾರಾಷ್ಟ್ರೀಯ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರಿನ ಶ್ರೀ ವಿದ್ಯಾ ವಿಶ್ವಸಂಶೋಧನಾ ಪ್ರತಿಷ್ಠಾನ ಇವರು ಭಾರತೀಯ ಪರಂಪರೆಯ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಕೊಡ ಮಾಡುವ ಗೌರವ ಡಾಕ್ಟರೆಟ್ ಈ ಬಾರಿ ತಾಲೂಕಿನ ಇಬ್ಬರಿಗೆ ದೊರೆತಿದೆ. ಆಯೋಧ್ಯೆಗಾಗಿ ಇನ್ನೊಂದು ಬಾಲರಾಮನನ್ನು ಮತ್ತು ಕಾಶಿ ಅನ್ನಪೂರ್ಣೇಶ್ವರಿ ದೇವಿಯ ಶಿಲಾಮೂರ್ತಿ ನಿರ್ಮಿಸಿ ಪ್ರಸಿದ್ಧರಾಗಿರುವ ಇಡಗುಂಜಿಯ ಗಣೇಶ ಭಟ್ ಮತ್ತು ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಪರಂಪರೆಯನ್ನು ಮೂರು ತಲೆಮಾರುಗಳಿಂದ ಕಾಪಾಡಿಕೊಂಡು ಬಂದಿರುವ, ಇತ್ತೀಚೆಗೆ ಯಸಸ್ಕೀರ ಮಾನ್ಯತೆ ಪಡೆದ ಕೆರಮನೆ ಕುಟುಂಬದ ಶಿವಾನಂದ ಹೆಗಡೆ ಇವರಿಗೆ ಬೆಂಗಳೂರಿನಲ್ಲಿ ಏ. 11ರಂದು ಪ್ರದಾನ ಮಾಡಲಾಗುವುದು. ಸ್ವಾಮಿ ಶ್ರೀ ನಿರ್ಭಯಾನಂದ ಸರಸ್ವತಿ, ಡಾ. ಜಿ.ವಿ.ಎಸ್. ಶ್ರೀನಾಥ, ಅಶೋಕ ರಾಮಕೃಷ್ಣನ್, ಶ್ರೀನಿವಾಸಮೂರ್ತಿ ಮೊದಲಾದವರ ಸಮ್ಮುಖದಲ್ಲಿ ಗೌರವ ಡಾಕ್ಟರೆಟ್ ಪ್ರದಾನವಾಗಲಿದೆ.

ರಾಜ್ಯಕ್ಕೆ 7ನೇ ಸ್ಥಾನ ಪಡೆದ ಸಮಿತ್ ಗೋಕರ್ಣ



ಗೋಕರ್ಣ: ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಇಲ್ಲಿನ ಸಂಮಿತ್ ಅಮಿತ್ ಗೋಕರ್ಣ ಶೇ. 98.83 ಅಂಕ ಪಡೆದು ರಾಜ್ಯಕ್ಕೆ ಏಳನೆ ಸ್ಥಾನ ಪಡೆದುಕೊಂಡಿದ್ದಾನೆ. ಕರ್ಕಿಳದ ಕೃಷಿಯೇತರ ತಿಕ್ಕಲಿ ಸಂಸ್ಥೆಯ ಕಾಲೇಜಿನ ವಿದ್ಯಾರ್ಥಿಯಾಗಿದ್ದು, ಈ ಹಿಂದೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾನೆ. ಉದ್ಯಮಿ ಅಮಿತ ಗೋಕರ್ಣ-ರೇಷ್ಮಾ ಅವರ ಪುತ್ರನಾಗಿದ್ದು ವಿದ್ಯಾರ್ಥಿ ಸಾಧನೆಗೆ ಹಿತೈಷಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಮನೆಗಣತಿ ಕಾರ್ಯಕ್ಕೆ ಚಾಲನೆ ನೀಡಿದ ಹೆಬ್ಬಾರ

ಯಲ್ಲಾಪುರ: 2027ರ ಜನಗಣತಿಯ ಪೂರ್ವಭಾವಿಯಾಗಿ ನಡೆಯುತ್ತಿರುವ 'ಮನೆಗಣತಿ ಕಾರ್ಯಕ್ಕೆ' ಶಾಸಕ ಶಿವರಾಮ ಹೆಬ್ಬಾರ್‌ಕಿಕ್ಕವಾರ ಚಾಲನೆ ನೀಡಿದರು. ಅನಂತರ ಮಾತನಾಡಿದ ಅವರು, ಮನೆಗಣತಿ ಕಾರ್ಯವು ಜನಗಣತಿಯ ಪ್ರಮುಖ ಹಂತವಾಗಿದ್ದು, ಪ್ರತಿಯೊಬ್ಬ ನಾಗರಿಕರು ನಿಖರವಾದ ಮಾಹಿತಿ ನೀಡುವ ಮೂಲಕ ಸಹಕರಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಚಂದ್ರಶೇಖರ ಕಮ್ಮಾರ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ಜೀವನ ಶಿಕ್ಷಣ ಶಿಬಿರ ಸಮಾರೋಪ

ಯಲ್ಲಾಪುರ: ವಿಶ್ವದರ್ಶನ ಸೇವಾ, ಗೋವರ್ಧನ ಗೋಶಾಲೆ ಕಡಬೊಳೆ, ಆಮಲ ಭಾರತೀಯ ಸಾಹಿತ್ಯ ಪರಿಷದ್ ಇವರ ಸಂಯುಕ್ತ ಆಶ್ರಯದಲ್ಲಿ ಭಾರತೀಯ ಜೀವನ ಶಿಕ್ಷಣ ಶಿಬಿರ ಸಮಾರೋಪ ಸಮಾರಂಭ ಏ. 12ರಂದು ವಿಶ್ವದರ್ಶನ ಆವರಣದಲ್ಲಿ ಸಂಜೆ 4.15ಕ್ಕೆ ನಡೆಯಲಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರ ವಿಭಾಗದ ಪ್ರಮುಖ ಅರುಣಕುಮಾರ ಪ್ರಧಾನ ಭಾಷಣ ಮಾಡಲಿದ್ದಾರೆ.

ಪುರಾತನ ಹಸ್ತಪ್ರತಿ, ದಾಖಲೆ ಸಂಗ್ರಹಿಸಿ: ಅಪರ ಜಿಲ್ಲಾಧಿಕಾರಿ

ಕಾರವಾರದಲ್ಲಿ ಅಧಿಕಾರಿಗಳ ಸಭೆ, ದಾಖಲೆ ರಕ್ಷಿಸಲು ಅಗತ್ಯಕ್ರಮ ಕೈಗೊಳ್ಳಿ

ಪುರಾತನ ಹಸ್ತಪ್ರತಿ ರಕ್ಷಣೆ ಕುರಿತು ಕಾರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಯಿತು.

- ಜಿಲ್ಲೆಯಲ್ಲಿ ಪುರಾತನ ಹಸ್ತಪ್ರತಿಗಳು ದೊರೆಯುವ ಸಾಧ್ಯತೆಯಿರುವ ಐತಿಹಾಸಿಕ ಪ್ರದೇಶಗಳು, ಧಾರ್ಮಿಕ ಸ್ಥಳಗಳು ಮತ್ತು ಬಸದಿಗಳಿಗೆ, ಮುಜರಾಯಿ, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಗ್ರಂಥಾಲಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ತಂಡ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡುವಂತೆ ನಿರ್ದೇಶನ ನೀಡಿದರು.

• ಕನ್ನಡಪ್ರಭ ವಾರ್ತೆ ಕಾರವಾರ

ಜಿಲ್ಲೆಯಲ್ಲಿ ಲಭ್ಯವಿರುವ ಶತಮಾನಗಳಷ್ಟು ಹಳೆಯ ಹಸ್ತಪ್ರತಿಗಳು, ದಾಖಲೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಅವುಗಳನ್ನು ರಕ್ಷಿಸಿ, ವೈಜ್ಞಾನಿಕ ರೀತಿಯಲ್ಲಿ ದಾಖಲೀಕರಣಗೊಳಿಸಲು ಕ್ರಮ ಕೈಗೊಳ್ಳುವಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಸಾಜಿದ ಮುಲ್ಲಾ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪುರಾತತ್ವ ಇಲಾಖೆಯಿಂದ ರಾಜ್ಯದಲ್ಲಿರುವ ಹಳೆಯ ಹಸ್ತಪ್ರತಿಗಳು, ದಾಖಲೆ ಸಂಗ್ರಹಿಸುವ ಮೂಲಕ ನಮ್ಮ ಪ್ರಾಚೀನ ಪರಂಪರೆ, ಇತಿಹಾಸವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ ಅವುಗಳನ್ನು ವೈಜ್ಞಾನಿಕವಾಗಿ ಡಿಜಿಟಲೈಸೇಷನ್ ಮಾಡುವ ಕಾರ್ಯ ನಡೆಯುತ್ತಿದ್ದು ನಮ್ಮ ಜಿಲ್ಲೆಯಲ್ಲಿ ಪ್ರಸಿದ್ಧ ರಾಜ ಮನೆತನಗಳ ಆಗಮ, ಅಕ್ಕಿ, ಧಾರ್ಮಿಕ ಪರಂಪರೆಗಳ ಆಚರಣೆಗಳನ್ನು ಒಳಗೊಂಡ ವೈಭವದ ಇತಿಹಾಸವಿದ್ದು, ಈ ಬಗ್ಗೆ ಹಸ್ತಪ್ರತಿಗಳಲ್ಲಿ ಹೆಚ್ಚಿನ ದಾಖಲೆಗಳು ಇರುವ ಸಾಧ್ಯತೆಗಳಿದ್ದು, ಇಂತಹ ದಾಖಲೆಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವಂತೆ ತಿಳಿಸಿದರು.

ಹಸ್ತಪ್ರತಿಗಳ ಬಗ್ಗೆ ಪದವಿಪೂರ್ವ ಕಾಲೇಜುಗಳ ಸಂಸ್ಕೃತ ಅಧ್ಯಾಪಕರಿಗೆ ಮಾಹಿತಿ ಇದ್ದಲ್ಲಿ ಅವುಗಳನ್ನು ಸಂಗ್ರಹಿಸುವಂತೆ ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳ ಮೂಲಕ ಪೋಷಕರಿಗೆ ಅವರ ಮನೆಗಳಲ್ಲಿರುವ ಹಸ್ತಪ್ರತಿಗಳು ಇದ್ದಲ್ಲಿ ಮಾಹಿತಿ ನೀಡುವಂತೆ ತಿಳಿಸಿ ಎಂದು ತಿಕ್ಕಲಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿರುವ ಪುರಾತನ ಹಸ್ತಪ್ರತಿಗಳು ದೊರೆಯುವ ಸಾಧ್ಯತೆಯುಳ್ಳ ಐತಿಹಾಸಿಕ ಪ್ರದೇಶಗಳು, ಧಾರ್ಮಿಕ ಸ್ಥಳಗಳು ಮತ್ತು ಬಸದಿಗಳಿಗೆ, ಮುಜರಾಯಿ, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಗ್ರಂಥಾಲಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ತಂಡ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡುವಂತೆ ನಿರ್ದೇಶನ ನೀಡಿದರು.

ಜಿಲ್ಲೆಯ ಸಾರ್ವಜನಿಕರು ತಮ್ಮ ಮನೆಗಳಲ್ಲಿ ಒಳಗೊಂಡ ವೈಭವದ ಇತಿಹಾಸವಿದ್ದು, ಈ ಬಗ್ಗೆ ಹಸ್ತಪ್ರತಿಗಳಲ್ಲಿ ಹೆಚ್ಚಿನ ದಾಖಲೆಗಳು ಇರುವ ಸಾಧ್ಯತೆಯಿದ್ದು, ಇಂತಹ ದಾಖಲೆಗಳ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದ ಅವರು, ಸಾರ್ವಜನಿಕರು ನೀಡುವ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅವುಗಳಿಗೆ ಯಾವುದೇ ಹಾನಿಯಾಗದಂತೆ ಡಿಜಿಟಲೈಸ್ ಮಾಡಿ ಪುನಃಸಂಬಂಧಪಟ್ಟವರಿಗೆಹಿಂದಿರುಗಿಸಲಾಗುವುದು ಎಂದರು.

ಸಭೆಯಲ್ಲಿ ವರ್ಚುವಲ್ ಮೂಲಕ ಭಾಗವಹಿಸಿದ್ದ ಸೂರ್ಯವಲ್ಲಿ ಮಠದ ಡಾ. ಕೃಷ್ಣ ಜೋಷಿ ಮತ್ತು ಗೋಕರ್ಣ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರು ತಮ್ಮ ಮಠಗಳು ಮತ್ತು ಕಾಲೇಜುವ್ಯಾಪ್ತಿಯಲ್ಲಿರುವ ಪುರಾತನ ತಾಳೆಗರಿಯ ಹಸ್ತಪ್ರತಿಗಳಿದ್ದು, ಇವುಗಳನ್ನು ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಬಹುದು ಎಂದರು.

ಸಭೆಯಲ್ಲಿ ವರ್ಚುವಲ್ ಮೂಲಕ ಬೆಂಗಳೂರಿನ ಪುರಾತತ್ವ ಇಲಾಖೆಯ ನಿರ್ದೇಶಕ ಸ್ಕಿತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಮಂಗಳಾ ನಾಯ್ಕ, ಮುಜರಾಯಿ ಇಲಾಖೆ ಸಹಾಯಕ ಆಯುಕ್ತೆ ಸುಧಾ ಎನ್. ತಳವಾರ, ಪದವಿಪೂರ್ವ ತಿಕ್ಕಲಿ ಇಲಾಖೆ ಉಪ ನಿರ್ದೇಶಕ ಸತೀಶ್ ನಾಯ್ಕ ಮತ್ತಿತರರು ಇದ್ದರು.

ಹಿರೇಗುತ್ತಿ ಕಾಲೇಜಿಗೆ ಉತ್ತಮ ಫಲಿತಾಂಶ

ವಾಣಿಜ್ಯ, ಕಲಾ ಹಾಗೂ ವಿಜ್ಞಾನ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳು

• ಕನ್ನಡಪ್ರಭ ವಾರ್ತೆ ಗೋಕರ್ಣ

ಹಿರೇಗುತ್ತಿ ಸರ್ಕಾರಿ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ಫಲಿತಾಂಶ ಶೇ. 95 ದಾಖಲಾಗಿದೆ.

ಒಟ್ಟು 224 ವಿದ್ಯಾರ್ಥಿಗಳಲ್ಲಿ 212 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಕಾಲೇಜಿನ ಮೂರು ಸಂಯೋಜನೆಗಳಿಲ್ಲಿ ಒಟ್ಟು 55 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, ತೇರ್ಗಡೆಯಾಗಿದ್ದಾರೆ. ಕಲಾ ವಿಭಾಗದಲ್ಲಿ 111 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು ಒಟ್ಟು 102 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ. 92 ಫಲಿತಾಂಶ ದಾಖಲಾಗಿದೆ. ಪ್ರಥಮ ಸ್ಥಾನವನ್ನು ಜಾಹ್ನವಿ ಮಾತ್ರಿ ಗೌಡ (ಶೇ. 98), ದ್ವಿತೀಯ ಸ್ಥಾನ ದಿವ್ಯಾ ಮಂಗೇಶ ಗೌಡ (ಶೇ. 97) ಹಾಗೂ ತೃತೀಯ ಸ್ಥಾನ ಸಂಜನಾ ಚಂದ್ರಶೇಖರ ನಾಯ್ಕ (ಶೇ. 95) ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ 62 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಒಟ್ಟು61 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶೇ. 99 ಫಲಿತಾಂಶ ದಾಖಲಾಗಿದೆ. ಪ್ರಥಮ ಸ್ಥಾನವನ್ನು ಮಾರೇವಿ ಮಂಗೇಶ ಗೌಡ (ಶೇ. 97), ದ್ವಿತೀಯ ಸ್ಥಾನ ಕೇರ್ತಿ ಮಹಾಬಲೇಶ್ವರ ಗೌಡ (ಶೇ. 96), ತೃತೀಯ ಸ್ಥಾನ ಜಾಹ್ನವಿ ಬೇರಾ ಗೌಡ 556 (ಶೇ. 93) ಪಡೆದುಕೊಂಡಿದ್ದಾರೆ.

ವಿಜ್ಞಾನ ವಿಭಾಗದಲ್ಲಿ 50 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಒಟ್ಟು 49 (ಶೇ. 99) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪ್ರಥಮ ಸ್ಥಾನ ನಾಗಶ್ರೀ ತಿಪ್ಪಯ್ಯ ಗುನಗಾ (ಶೇ. 94), ದ್ವಿತೀಯ ಸ್ಥಾನ ಅರ್ಚನ ರಾಮಚಂದ್ರ ನಾಯಕ (ಶೇ. 92), ತೃತೀಯ ಸ್ಥಾನ ಜಯಶ್ರೀ ಗಣಪತಿ ಗೌಡ (ಶೇ.91.5) ಪಡೆದುಕೊಂಡಿದ್ದಾರೆ.

ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಕಾಲೇಜಿನ ಅಭಿವೃದ್ಧಿ ಸಮಿತಿಯ ಅಧ್ಯಕ್ಷ, ಶಾಸಕ ದಿನಕರ ಶೆಟ್ಟಿ ಮತ್ತು ಸದಸ್ಯರು ಅಭಿನಂದಿಸಿದ್ದಾರೆ.

ಯಲ್ಲಾಪುರ ಸರ್ಕಾರಿ ಪಪೂ ಕಾಲೇಜಿಗೆ ಉತ್ತಮ ಫಲಿತಾಂಶ

ಯಲ್ಲಾಪುರ: ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಫಲಿತಾಂಶ ಉತ್ತಮವಾಗಿದ್ದು ಪರೀಕ್ಷೆಗೆ ಹಾಜರಾದ 280ರಲ್ಲಿ 253 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಕಾಲೇಜಿನ ಫಲಿತಾಂಶ ಶೇ. 86.79 ಆಗಿದೆ.

ವಿಜ್ಞಾನ ವಿಭಾಗದಲ್ಲಿ ಒಟ್ಟು 100. ವಾಣಿಜ್ಯ ವಿಭಾಗದಲ್ಲಿ ಶೇ. 95.95, ಕಲಾ ವಿಭಾಗದಲ್ಲಿ ಶೇ. 80.60 ಫಲಿತಾಂಶ ಬಂದಿದ್ದು ವಿಜ್ಞಾನವಿಭಾಗದಲ್ಲಿ ವೇದಿತ್ರಿ ವೆಂಕಟ್ರಮಣ ಭಟ್ಟ (581) ತಾಲೂಕಿಗೆ ಪ್ರಥಮ ಸ್ಥಾನ ಪಡೆದು, ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಕಲಾ ವಿಭಾಗದಲ್ಲಿ ಭವ್ಯಾ ಬರಗಾಡೆ, ಸಂಜ ಎನ್ (ಶೇ. 94.16) ಪ್ರಥಮ, ಭಾಗೀರಥಿ ಗುಂಡ್ಕಿ (ಶೇ. 89.5) ದ್ವಿತೀಯ, ಮಂಜು ಪಾಟೀಲ (ಶೇ. 89.33) ತೃತೀಯ; ವಾಣಿಜ್ಯ ವಿಭಾಗದಲ್ಲಿ ಸಂಕೇತ ನಾಯ್ಕ (ಶೇ. 97) ಪ್ರಥಮ, ಅರ್ಚನಾ ಮರಾಠಿ (ಶೇ. 94.83), ಅಕ್ಷತಾ ಬರಗಾಡೆ (ಶೇ. 93.16) ತೃತೀಯ; ವಿಜ್ಞಾನ ವಿಭಾಗದಲ್ಲಿ ವೇದಿತ್ರಿ ಭಟ್ಟ (ಶೇ. 96.83) ಪ್ರಥಮ, ರಮ್ಯಾ ಪಾಟೀಲ (ಶೇ. 91.83), ಕಾವ್ಯಾ ಭಟ್ಟ (ಶೇ. 81.66) ತೃತೀಯ ಸ್ಥಾನ ಪಡೆದಿದ್ದಾರೆ.

ತೆರಿಗೆ ವಸೂಲಾತಿಯಲ್ಲಿ ಹಳೆಯಾಳ ಪ್ರಥಮ, ಗ್ರಾಪಂ ಸಿಬ್ಬಂದಿಗೆ ಸನ್ಮಾನ

ಗ್ರಾಮ ಸ್ವರಾಜ್ಯ: ಗ್ರಾಮಗಳು ಆರ್ಥಿಕವಾಗಿ ಸಶಕ್ತವಾಗಲಿ

ತೆರಿಗೆ ವಸೂಲಾತಿಯಲ್ಲಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನ ಗಳಿಸಿದ ಹಳೆಯಾಳ ತಾಪಂನ ಇಒ ವಿಲಾಸರಾಜ್ ಪ್ರಸನ್ನ ಅವರಿಗೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.

• ಕನ್ನಡಪ್ರಭ ವಾರ್ತೆ ಹಳೆಯಾಳ

ಹಳೆಯಾಳ ತಾಪಂ ತೆರಿಗೆ ವಸೂಲಾತಿಯಲ್ಲಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನ ಗಳಿಸುವ ಮೂಲಕ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡುವಲ್ಲಿ ಮುದರಿ ಹೆಜ್ಜೆಯನ್ನಿಟ್ಟಿದೆ ಎಂದು ಉತ್ತರ ಕನ್ನಡ ಜಿಪಂ ಉಪಕಾರ್ಯದರ್ಶಿ ಪ್ರಕಾಶ ಹಾಲಮ್ಮನವರ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಪುರಭವನದ ಸಭಾಂಗಣದಲ್ಲಿ ಇತ್ತೀಚೆಗೆ ಅಯೋಜಿಸಿದ 2025-26ನೇ ಸಾಲಿನ ತೆರಿಗೆ ವಸೂಲಾತಿಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಹಳೆಯಾಳ ತಾಪಂಯನ್ನು ಅಭಿನಂದಿಸುವ ಕಾರ್ಯಕ್ರಮಲ್ಲಾಪ್ತಿಸಿ ಅವರು ಮಾತನಾಡಿದರು. ಗ್ರಾಮ ಸ್ವರಾಜ್ಯದ ಕನಸು ನನಸಾಗಲು ಗ್ರಾಮಗಳು ಆರ್ಥಿಕವಾಗಿ ಸಶಕ್ತವಾಗಬೇಕು. ಆದ್ದಾಗಿ ತೆರಿಗೆ ಸಂಗ್ರಹಣೆ ಮಾಡುವುದು ಅವಶ್ಯಕವಾಗಿದೆ ಎಂದು ಹೇಳಿದರು.

ತೆರಿಗೆ ವಸೂಲಾತಿ ಬಹು ಸವಾಲಿನ ಹಾಗೂ ಕಷ್ಟದ ಕೆಲಸವಾಗಿದೆ. ಆದರೆ ಹಳೆಯಾಳ ತಾಲೂಕಿನ ಎಲ್ಲ 20 ಗ್ರಾಮಗಳು ಒಗ್ಗಟ್ಟು ಹಾಗೂ ಶಿಸ್ತಿನಿಂದ ಜತೆಗೂಡಿ ಶ್ರಮಿಸಿದ್ದಂದ ಈ ಮಹತ್ವದ್ದಾದ ಸಾಧ್ಯವಾಯಿತು. ಗ್ರಾಪಂನ ಎಲ್ಲ ವಿಭಾಗಗಳ ಸಿಬ್ಬಂದಿ ಹಗಲು ರಾತ್ರಿಯೆನ್ನದೇ ನಿಷ್ಠತೆ ಗುರಿಯೊಂದಿಗೆ ತೆರಿಗೆ ಸಂಗ್ರಹಣೆ ಜಾಗೃತಿ, ಅಭಿಯಾನ, ಮನೆ ಮನೆ ಪ್ರಚಾರ ಮಾಡುವ ಮೂಲಕ ಯಶಸ್ಸು ಗಳಿಸಿದ್ದು, ಈ ಸಾಧನೆಯು ನಿರಂತರವಾಗಿ ಸಾಗಲಿ ಎಂದು ಹಾರೈಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ತಾಪಂ ಇಒ ವಿಲಾಸರಾಜ್ ಪ್ರಸನ್ನ ಮಾತನಾಡಿ, ಗ್ರಾಮೀಣ ಭಾಗಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಬೇಕಾದ ಹಣಕಾಸಿನ ವ್ಯವಸ್ಥೆಯು ಕೇವಲ ತೆರಿಗೆ ಸಂಗ್ರಹಣೆಯಿಂದ ಮಾತ್ರ ಸಾಧ್ಯ ಎಂಬ ವಿಷಯವನ್ನು ಪ್ರತಿ ಮನೆಗಳೂ, ಹಳ್ಳಿಗಳೂ ಮನವರಿಕೆ ಮಾಡುವ ದಿಸೆಯಲ್ಲಿ ಕೈಗೊಂಡ ನಮ್ಮ ಕಾರ್ಯಕಂತ್ರ ಯಶಸ್ವಿಯಾಯಿತೆಂದರು.

ತಾಪಂ ಸಹಾಯಕ ನಿರ್ದೇಶಕ ಅನುಪಮಾ ಬೆನ್ನೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ತರಬೇತಿ ಸಂಯೋಜಕ, ಮುಖ್ಯ ಸಂಪನ್ಮೂಲ ವ್ಯಕ್ತಿ ಮಹಾದೇವಿ ಅಂಗೡಳ್ಳಿ ಅವರು ತಾಲೂಕಿನ ಆಡಳಿತ ವ್ಯವಸ್ಥೆ ಬಗ್ಗೆ ಹೇಳಿದರು. ತೆರಿಗೆ ಸಂಗ್ರಹಣೆಯಲ್ಲಿ ಎದುರಾದ ಸಮಸ್ಯೆಗಳ ಕುರಿತು ಗ್ರಾಪಂನ ವಿವಿಧ ವಿಭಾಗಗಳ ಸಿಬ್ಬಂದಿ ತಮ್ಮ ಅನುಭವ ಹಂಚಿಕೊಂಡರು.

ಸನ್ಮಾನ: ಸಮಾರಂಭದಲ್ಲಿ ಎಲ್ಲ ಇಪ್ಪತ್ತು ಗ್ರಾಮಂಗಳಿಗೆ ಅಭಿನಂದನಾ ಪ್ರತಿಕಾನಾ ಪತ್ರ ವಿತರಿಸಲಾಯಿತು. ಇದೇ ಸಂದರ್ಭ ತೆರಿಗೆ ಸಂಗ್ರಹಣೆಯಲ್ಲಿ ರಾಜ್ಯದಲ್ಲಿ ಪ್ರಥಮ ಸ್ಥಾನ ಗಳಿಸಲು ಪ್ರೇರಣೆ ನೀಡಿದ ಉತ್ತರ ಕನ್ನಡ ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಪ್ರಕಾಶ ಹಾಲಮ್ಮನವರ ಹಾಗೂ ಹಳಯಾಳ ತಾಪಂ ಇಒ ವಿಲಾಸರಾಜ್ ಪ್ರಸನ್ನ ಅವರನ್ನು ಸನ್ಮಾನಿಸಲಾಯಿತು. ಆಕ್ಷರ ರಾಮೋಜಿ ಸಹಾಯಕ ನಿರ್ದೇಶಕ ಎಸ್.ಎಸ್. ನೂಲಿನ್, ಜಿಪಂ ಎಂಜಿನಿಯರ್‌ಸತೀಶ ಆರ್. ಕೃಷಿ ಸಹಾಯಕ ನಿರ್ದೇಶಕ ಪಿ.ಐ. ಮಾನೆ ಇದ್ದರು. ಪಿಡಿಒ ಈರಣ್ಣ ಇಲಾಲ್ ಹಾಗೂ ಉಮೇಶ ಗೌಡರ ಕಾರ್ಯಕ್ರಮ ನಿರೂಪಿಸಿದರು. ಸಭಾ ಕಾರ್ಯಕ್ರಮದ ಆನಂತರ ಗ್ರಾಪಂ ಸಿಬ್ಬಂದಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ನಾಳೆ ಬೃಹತ್ ಉಚಿತ ವೈದ್ಯಕೀಯ ಶಿಬಿರ

• ಕನ್ನಡಪ್ರಭ ವಾರ್ತೆ ಗೋಕರ್ಣ

ಇಲ್ಲಿನ ಶ್ರೀಲಾಮಿ ವಿದ್ಯಾವಾಹಿನಿ ಟ್ರಸ್ಟ್, ಸಹಕಾರದೊಂದಿಗೆ ಹುಬ್ಬಳ್ಳಿಯ ನಾಲ್ಕಾಡ ಮಲ್ಟಿ ಸ್ಪೆಶಾಲಿಟಿ ಮತ್ತು ಎಚ್.ಎ.ಸಿ. ಸುಟಿಕಾಯ ಆಸ್ಪತ್ರೆಯ ನುರಿತ ವೈದ್ಯರ ತಂಡದಿಂದ